# ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 600.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 174.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are same as in Ref. 1. The wordings in Ref. 2 are same as in Ref. 1.
5. **Note:** Singer has followed these wordings.

ರಾಗ: ಸೌರಾಷ್ಟ್ರ ತಾಳ: ಅಟ

ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ, ಸಂಗ ಬೇಡ || ಪ ||
ಸಿರಿ ವಾಯು ಮತ ಪೊಂದಿ ಹರುಷ ಪಡದವರ, ಸಂಗ ಬೇಡ || ಅಪ ||

ಮುಂದೆ ಭಲಾ ಎಂದು ಹಿಂದಾಡಿಕೊಂಬರ, ಸಂಗಬೇಡ
ಎಂದೆಂದಿಗೂ ಪರನಿಂದೆ ಮಾಡುವ ಪಾಪಿ, ಸಂಗಬೇಡ
ತಂದೆ ತಾಯಿಗೆ ಮನ ಬಂದಂತೆ ನುಡಿವರ, ಸಂಗ ಬೇಡ
ಇಂದು ಮುಖಿಯರ ಮಾತಿನಂದದಿ ಕುಣಿವರ, ಸಂಗ ಬೇಡ || 1 ||

ತುದಿ ನಾಲಿಗೆ ಬೆಲ್ಲ ಎದೆ ವಿಷವುಳ್ಳವರ, ಸಂಗ ಬೇಡ
ಬೆದರಿಕೆ ಮಾತುಗಳೊದರುವ ಜನರ, ಸಂಗ ಬೇಡ,
ಮದುವೆಯ ಕೆಡಿಸಿ ಮುದದಿ ನಲಿಯುವರ, ಸಂಗ ಬೇಡ
ಉದರ ಕೋಸುಗ ವಿಧಿಕರ್ಮ ತ್ಯಜಿಪರ, ಸಂಗ ಬೇಡ || 2 ||

ತುಂಟತನವ ಮಾಡಿ ಕುಟಿಲವ ನುಡಿವರ, ಸಂಗ ಬೇಡ

ಬಂಟರಾಗಿ ಧನಿಯ ಗಂಟಲ ಮುರಿವರ, ಸಂಗ ಬೇಡ

ಉಂಟು ತಮಗೆಂದು ಬಡವರ ಬೈವರ, ಸಂಗ ಬೇಡ

ಒಂಟ್ಯಾಗಿ ಪುರಂದರ ವಿಠ್ಠಲನೆನ್ನದವರ, ಸಂಗ ಬೇಡ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ತುದಿನಾಲಿಗೆ…** – 'ಮಧು ತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಾಲಾಹಲಂ' ಎನ್ನುವ ಸುಭಾಷಿತದ ಕನ್ನಡರೂಪ.

**ಉದರಕೋಸುಗ…**– ಹೊಟ್ಟೆ ಹೊರೆದುಕೊಳ್ಳಲು ನಿತ್ಯ ನೈಮಿತ್ತಿಕ ಕರ್ಮಗಳನ್ನೆಲ್ಲ ಬಿಟ್ಟುಬಿಡುವವರು; ಕೆಟ್ಟ ಕೆಲಸಗಳನ್ನು ಮಾಡುವವರು.

**Classification:** Keerthane
**Ankita:** purandara vittala
**Location:** NA
**Category:** Swabhava Vishleshane, Buddit Maatu
**Sub-Category:** Krishna, hari sarvottama, Vishnu, Narayana, jana, smarane, Lakshmi, hanuma, santosha, papa, tande, tayi, mana, nalige, bella, visha, maduve, karma, vidhi, badava, bayyi, udara,
**Pravachana:** NA
**Explanation:** NA